ಕಂಗಾಲಾಗಿ ಹನಿಗೂಡಿದ್ದ ಕಣ್ಣುಗಳಲ್ಲಿ 'ಒಡಲುಗೊಂಡ ಜೀವಿಗಳ ಹೊಟ್ಟೆಯ ಹಸಿವು ಅವುಗಳಿಗೆ ಎಂಥ ದುಃಸ್ಥಿತಿ ತರುತ್ತದೆಯಲ್ಲವೆ!' ಎಂದುಕೊಂಡು ತನ್ನ ದೈನ್ಯದ ಸ್ಥಿತಿಗೆ ತಾನೇ ಮರುಕ ಪಡುತ್ತ ಪುಣ್ಯಕೋಟಿಯಿಂದ ಒಂದಿಷ್ಟು ದೂರ ಹೋಗಿ ನಿಂತಿತು. ಹೆದರಿ ಹೌಹಾರಿಹೋಗಿದ್ದ ಪುಣ್ಯಕೋಟಿ ಈಗ ಒಂದಿಷ್ಟು ಧೈರ್ಯ ತಂದುಕೊಂಡು ಸುಮ್ಮನಾಯಿತಾದರೂ, ಯಾವುದೋ ಅಪರಾಧಿ ಪ್ರಜ್ಞೆ ಅದರ ಮನಸ್ಸಲ್ಲಿ ಸರಕ್ಕನೇ ಹಾಯ್ದು ಹೋಯಿತು. ಕಣ್ಣು ಬಿಡುತ್ತ ನಿಂತ ಅದರ ಸ್ಥಿತಿ ನೋಡಿ ಹುಲಿಮರಿಯೇ ಮತ್ತೆ ಮಾತಾಡತೊಡಗಿತು.

"ನನಗೆ ಗೊತ್ತು ಪುಣ್ಯಕೋಟಿಯಮ್ಮಾ, ಕ್ರೂರಪ್ರಾಣಿಯೆಂದು ನನ್ನ ಬಗ್ಗೆ ಶರಾ ಬರೆದಿರುವ ಕಾರಣ ನೀನು ನನಗೆ ಹಾಲು ಕುಡಿಸಲಾರೆ. ಇರಲಿ. ನಿನ್ನನ್ನು ಸ್ವಾರ್ಥಿ ತಾಯಿಯೆಂದು ದೂರಲಾರೆ. ಹಾಲು ಕುಡಿಸದಿದ್ದರೆ ಏನಾಯ್ತು? ನನ್ನ ಪ್ರಶ್ನೆಗಳಿಗೆ ಉತ್ತರಗಳನ್ನಾದರೂ ಕೊಡು. ನೋಡು, ನಿನ್ನ ಕರುವಿನಷ್ಟೇ ವಯಸ್ಸಿನ ನಾನು ನನ್ನ ತಾಯಿಯನ್ನು ಕಳೆದುಕೊಂಡಿದ್ದೇನೆ. ಬಿಸಿರಕ್ತದ ಮಾಂಸ ತಂದು ಕೊಡುತ್ತಿದ್ದ ಅಪ್ಪನೂ ನಿನ್ನ ಕಾರಣಕ್ಕಾಗಿ ಸತ್ತನು. ಹೇಳು, ಈಗ ನಾನು ನನ್ನ ಹೊಟ್ಟೆಗೆ ಏನು ತಿನ್ನಲಿ? ಹಸಿವಿನಿಂದ ಸಾಯಲೆ? ನೀನಂತೂ ಮಾಂಸ ಕೊಡಲಾರೆ. ಹಾಲು ಉಣಿಸು ಎಂದರೆ ಅದೂ ನಿನ್ನಿಂದಾಗುತ್ತಿಲ್ಲ. ಹಾಗಾದರೆ ನಾನೇನು ಮಾಡಲಿ ನನ್ನ ಹಸಿವಿಗೆ?"

ಹಸಿವೆಂಬ ನೋವಿನ ಒಟ್ಟು ಮೊತ್ತದಂತಿದ್ದ ಹುಲಿಮರಿಯ ಪ್ರಶ್ನೆಗಳು ಪುಣ್ಯಕೋಟಿಯ ಕರುಳನ್ನು ಕಲಕುವುದಕ್ಕಿಂತ ಹೆಚ್ಚಾಗಿ ಅದರ ಅಂತರಂಗವನ್ನೇ ಕೆಣಕಿದವು. 'ಆದರೆ ಏನು ಮಾಡುವುದು? ಹುಲಿಮರಿಗೆ ತಾನು ಹಾಲು ಕುಡಿಸಲು ಸಾಧ್ಯವೆ? ಇನ್ನು ಮೌನವಹಿಸಿ ಫಲವಿಲ್ಲ ಎಂದುಕೊಂಡ ಅದು ಅನಿವಾರ್ಯವಾಗಿ ಉತ್ತರಿಸತೊಡಗಿತು – "ಅಲ್ಲ, ಅರಣ್ಯದಲ್ಲಿ ಬೇಕಾದಷ್ಟು ಜಾತಿಯ ಪ್ರಾಣಿಗಳಿವೆಯಲ್ಲ, ನಿನಗೆ ಸಾಧ್ಯವಿರುವ ಯಾವುದಾದರೊಂದು ಪ್ರಾಣಿಯನ್ನು ಬೇಟೆಯಾಡಿ ತಿನ್ನಬಹುದಲ್ಲ?"

ಹುಲಿಮರಿ ಗಹಗಹಿಸಿ ನಗತೊಡಗಿತು. "ಅಂದರೆ ಅಮ್ಮಾ, ಆ ಪ್ರಾಣಿಗಳೂ ನಿಮ್ಮ ಹಾಗೇ ಜೀವಿಗಳಲ್ಲವೆ? ಅಥವಾ ಆ ಜಾತಿಯ ಜೀವಿಗಳ ಪ್ರಾಣಕ್ಕೆ ಕಿಮ್ಮತ್ತಿಲ್ಲವೆ? ಹಾಗಿದ್ದರೆ ನಿಮ್ಮ ಪ್ರಾಣಕ್ಕೂ ಅವುಗಳ ಪ್ರಾಣಕ್ಕೂ ಏನು ವ್ಯತ್ಯಾಸ? ಪ್ರಾಣ ಪವಿತ್ರವೆನ್ನುವುದಾದರೆ, ಅದು ಪುಣ್ಯಕೋಟಿಯದಿರಲಿ, ನರಿ, ಹಂದಿ, ಜಿಂಕೆಗಳದೇ ಇರಲಿ, ಎಲ್ಲ ಪ್ರಾಣಿಗಳ ಪ್ರಾಣವೂ ಪವಿತ್ರವೇ ಆಗಬೇಕಲ್ಲವೆ? ಅಷ್ಟಕ್ಕೂ ನಿನ್ನನ್ನು ಕೊಂದರೆ ನಾನಾಗಲಿ, ನನ್ನ ಅಪ್ಪನಾಗಲಿ, ಪಾಪಿಯಾಗುವುದಾದರೆ, ಆ ಯಾವುದೇ ಪ್ರಾಣಿಗಳನ್ನು ಕೊಂದರೂ ಅದು ಪಾಪವೇ ಆಗುವುದಿಲ್ಲವೆ? ಆಕಳನ್ನು ಕೊಂದರೆ ಮಾತ್ರ ಪಾಪವೆ?" ಎತ್ತರಿಸಿದ ದನಿಯಲ್ಲೇ ಸಿಟ್ಟಿನಿಂದ ಕೇಳತೊಡಗಿದ ಹುಲಿಮರಿಗೆ ದಮ್ಮು ಹತ್ತಿದಂತಾಯ್ತು.

"ಹಾಂ, ಹಾಗೂ ಮಾಡಲು ಹೋದೆ ಅಮ್ಮಾ. ಜಿಂಕೆಯ ಹಿಂಡೊಂದನ್ನು ಬೆನ್ನು ಹತ್ತಿದೆ. ದೊಡ್ಡ ಜಿಂಕೆಯನ್ನು ಹಿಡಿಯಲು ಸಾಧ್ಯವಾಗದಾದಾಗ, ಮರಿ ಜಿಂಕೆಯೊಂದನ್ನು ಬೇಟೆಯಾಡಲು ಅಟ್ಟಾಡಿಸತೊಡಗಿದೆ. ಆದರೆ... ಪುಣ್ಯಕೋಟಿಯಮ್ಮಾ, ತಮ್ಮ ಕಂದಮ್ಮನನ್ನು ಕೊಲ್ಲುವುದನ್ನು ನೋಡಿ ತಾಯಿ ಜಿಂಕೆಗಳು ಸುಮ್ಮನಿದ್ದಾವೆಯೆ? ಅವೂ ನಿನ್ನ ಹಾಗೆ ತಾಯಂದಿರೇ ಅಲ್ಲವೆ? ಎಲ್ಲ ಸೇರಿ ಒಮ್ಮೆಲೇ ನನ್ನ ಮೇಲೆ ಎಗರಿ ಬಿದ್ದು ನುಜ್ಜುಗುಜ್ಜು ಮಾಡಿ ಹಾಕಿದವು. ಸಣ್ಣವರ ಮೇಲೆ ದೊಡ್ಡವರು ಮಾಡುವ ಹಿಂಸೆಯ ಪರಿಯೇ ಅಂಥದಲ್ಲವೆ? ಸತ್ತೆನೋ, ಬದುಕಿದೆನೋ ಅಂತ ಅವುಗಳ ಕೈಯಿಂದ ತಪ್ಪಿಸಿಕೊಂಡು ಬಂದದ್ದೇ ಒಂದು ದೊಡ್ಡ ಸಾಹಸ. ನೋಡಿಲ್ಲಿ, ಚಿಗರೆಗಳ ಹಿಂಡು ಕೊಂಬಿನಿಂದ ಚುಚ್ಚಿದ ಗಾಯಗಳನ್ನು. ಮಾಂಸವಂತೂ ಸಿಗಲಿಲ್ಲ. ಸಿಕ್ಕದ್ದು ಮೈತುಂಬಾ ಗಾಯಗಳು ಮಾತ್ರ."

ಪುಣ್ಯಕೋಟಿಗೆ ಮಾತೇ ಹೊರಡುತ್ತಲಿಲ್ಲ. ಆದರೂ ತಡಬಡಿಸುತ್ತ, "ಹಾಗಿದ್ದರೆ... ನಿನಗೆ ಬರೀ